(2) 6ನೇ ರೂಲಿನ (ಬಿ) ಕ್ಲಾಜಿನ ಪಕ್ಕದಲ್ಲಿ ನಮೂದವಾಡಲ್ಪಟ್ಟ "ಮನೆಗಳು, ಕಟ್ಟಗಳು, ಅಥವಾ ಜಮ್ರ್ಗಳು ಇವು ಗಳ ಮೇಲೆ ವಟ್ಟುಕೆಲಸಗಳಿಗಾಗಿಯಾಗಲಿ, ಬೆಳಕು ಪುಂಟುಮಾಡುವ ಬಗ್ಗೆ ಅಥವಾ ನೀರಾವರಿ ಕೆಲಸಗಳಿಗಾಗಿಯಾಗಲಿ ಅವುಗಳ ಸಾಲೀ ಯಾನಾ ಹುಟ್ಟುವಳೀ ಪ್ರಕಾರ ತೆರಿಗೆಗಳು" ಯಂಬ ಮಾತುಗಳು ಬಿಟ್ಟು ಬಿಡಲ್ಪಡತಕ್ಕದ್ದು.

(3) 7ನೇ ರೂಲ್‌ನಲ್ಲಿ "ಖಾಲಿಪಡಿಸಿದ ಕಮ್ಮಿಷನರು ಯಾವ ತರಗತಿಗಳಿಗೆ ಶೇರಿಯಿರುತ್ತಾನೊ ಅಂಥಾ ತರಗತಿಗಳ" ಯೆಂಬ ಮಾತುಗಳಿಗೆ ಬದಲಾಗಿ "ಖಾಲಿಪಡಿಸಿದ ಕಮ್ಮಿಷನರು ಯಾವ ತರಗತಿಗೆ ಪ್ರತಿನಿಧಿಯಾಗಿದ್ದನೊ ಅಂಥಾ ತರಗತಿಯ" ಯಂಬ ಮಾತ್ಯ ಗಳು ಶೇರಿಸತಕ್ಕದ್ದು.

(4) 9ನೇ ರೂಲ್‌ನಲ್ಲಿ "ಭರ್ತಿಯಾಗತಕ್ಕ" ಯಂಬ ಮಾತಿನ ಆಜಿಗೆ "ಆತನು ಶೇರಿರತಕ್ಕ ತರಗತಿಯ ಪ್ರತಿನಿಧಿಗಳಲ್ಲಿ" ಯಂಬ ಮಾತುಗಳು ಶೇರಿಸತಕ್ಕದ್ದು.

ಹುಕ್ಕುಂ ಬಮೋಜೇಬ
ಹೆಚ್. ಮೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 5ನೇ ಏಪ್ರಿಲ್ 1884.

ಇದರಡಿ ನಮೂದು ಮಾಡಲ್ಪಟ್ಟ ದೊಡ್ಡ ಮನುಷ್ಯರು, ಸ್ರ್ 1879ನೇ ಇಸವಿ ಫಿಬ್ರವರೀ 18ನೇ ಮಕ್ತುಂ ರೂಲ್ಸ್ ಅನುಸರಿಸಿ ಮೈಸೂರು ಚೀಫ್ ಕೋರ್ಟಿನಲ್ಲಿ ಅಡ್ವೋಕೇಟರಾಗಿ ದಾಖಲ್ಮಾಡಲ್ಪಟ್ಟಿರುತ್ತಾರೆ:—

108. ನುಗ್ಗೀಹಳ್ಳಿ ಚಲುವಯ್ಯಂಗಾರ್ .. ಬ್ಯಾರಿಸ್ಟರ್ ಆಫ್ ಲಾಸ್ ಮತ್ತು ಮದ್ರಾಸ್ ಹೈಕೋರ್ಟು ವಕೀಲರು.

ಹುಕ್ಕುಂ ಬಮೋಜೇಬ್,
ಎಸ್. ಹೇಮೂಜಿಡಾಫ್,
ರಿಜಿಸ್ಟ್ರಾರ್.

ಫಿನಾರ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವ ರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇನ್ಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡರ್ಸ್,
ಕಾಂಪ್ಟ್ರೋಲರ್.